ಸದನದಲ್ಲಿ ಉತ್ತರಿಸುವ ಪ್ರಶ್ನೆ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಗುರುವಾರ, ದಿನಾಂಕ: 18ನೇ ಜುಲೈ, 2019

ಜನವರಿ 2015 ರಿಂದ ಮಾರ್ಚ್ 2015 ರವರೆಗೆ 4 ಚಕ್ರದ ಭಾರತ್-3 ವಾಯು ಮಾಲಿನ್ಯ ಗುಣಮಟ್ಟದ ಬಗ್ಗೆ

ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) -

53 (551) ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯ ಅಧೀನದಲ್ಲಿರುವ ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಅಧಿಕಾರಿಯ ಕಛೇರಿ, ಬೆಂಗಳೂರು ಇಲ್ಲಿ ಜನವರಿ 2015 ರಿಂದ ಮಾರ್ಚ್ 2015ರವರೆಗೆ ನಾಲ್ಕು ಚಕ್ರದ ಭಾರತ್ 3ರ ವಾಯು ಮಾಲಿನ್ಯದ ಗುಣಮಟ್ಟ ಹೊಂದಿದ ವಾಹನಗಳ ನೋಂದಣಿಯಾದ ಸಂಖ್ಯೆ ಎಷ್ಟು ;

(ಆ) ಸದರಿ ಅವಧಿಯಲ್ಲಿ ಕಛೇರಿಯಲ್ಲಿ ಅಧಿಕಾರಿಯಾಗಿ ಕರ್ತವ್ಯ ನಿರತರಾಗಿದ್ದ ಪ್ರಾದೇಶಿಕ ಸಾರಿಗೆ ಅಧಿಕಾರಿಯ ಪೂರ್ಣ ವಿವರ ನೀಡುವುದು ;

(ಇ) ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಿ.ಎಸ್.ಆರ್.84(ಇ) ದಿ: 09.02.2009ರಲ್ಲಿ ತಿಳಿಸಿರುವಂತೆ 01.04.2010ರ ನಂತರ ನಾಲ್ಕು ಚಕ್ರದ ವಾಹನದ ನೋಂದಣಿ ವೇಳೆ ಅದರ ವಾಯು ಮಾಲಿನ್ಯದ ಗುಣಮಟ್ಟ ಭಾರತ್-4ರ ಮಾನದಂಡದಂತೆ ಇರಬೇಕೆಂದು ತಿಳಿಸಲಾಗಿದ್ದು, ಈ ನಿಯಮಾವಳಿಯನ್ನು ಪಾಲಿಸದೇ ಭಾರತ್-3ರ ವಾಯು ಮಾಲಿನ್ಯದ ಗುಣಮಟ್ಟದ ನಾಲ್ಕು ಚಕ್ರದ ವಾಹನ ನೋಂದಣಿ ಮಾಡಿದ ಅಧಿಕಾರಿ ಮೇಲೆ ಏನು ಕ್ರಮ ಜರುಗಿಸಲಾಗುವುದು;

(ಈ) ಭಾರತ್-3ರ ವಾಯು ಮಾಲಿನ್ಯದ ನಾಲ್ಕು ಚಕ್ರದ ವಾಹನ ನೋಂದಣಿಯಾಗಿದ್ದು ಇಂತಹ ವಾಹನದ ಉಪಯೋಗದಿಂದ ಬೆಂಗಳೂರು ನಗರದಲ್ಲಿ ಆಗಿರುವ ವಾಯು ಮಾಲಿನ್ಯದ ಬಗ್ಗೆ ಸರ್ಕಾರಕ್ಕೆ ಅರಿವು ಇದೆಯೇ ?